95

ಪುನರುಜ್ಜೀವನ

(ಏಕಾಂಕ ನಾಟಕ)

★

ಪ್ರಹಸನ ರಚಯಿತರು:

ಶ್ರೀ| ಗೋವಿಂದ ಭಟ್ಟ, ಶೇಡಿಗುಮ್ಮೆ,

ಕುಂಬಳೆ, ದಕ್ಷಿಣ ಕನ್ನಡ.

1956.

ಒಂದಾಣೆ ಮಾಲೆ

ಪುನರುಜ್ಜೀವನ

(ಏಕಾಂಕ ನಾಟಕ).

ಪಾತ್ರ ಪರಿಚಯ:

೧. ಶಿವರಾಯ — ಊರಿನ ಅಢ್ಯಗೃಹಸ್ಥ, ವೈದಿಕ, ನಿಷ್ಠಾವಂತ, ನವೀನ ಪರಿಷ್ಕಾರಕ್ಕೆ ಸೇರಿದವರು.
೨. ಕೇಶವ ಭಾವ — ಶಿವರಾಯರ ಅಪ್ತಸ್ನೇಹಿತ.
೩. ಮಂಜಪ್ಪ — ರೈತರಲ್ಲಿ ಮುಖ್ಯಸ್ಥ.
೪. ದೂಮಣ್ಣ. ೫. ಕಾಂತಪ್ಪ — ರೈತರು.
೬. ರಾಮಣ್ಣ — ಹೋಟೆಲ್ ಮಾಲಿಕ.
೭. ಡೆಮೊನ್‌ಸ್ಟ್ರೇಟರ್ — ವ್ಯವಸಾಯ ಪ್ರದರ್ಶಕರು.
೮. ಪಾರಮ್ಮ — ಶಿವರಾಯರ ಧರ್ಮಪತ್ನಿ.
೯. ಸರಸಮ್ಮ — ನೆರೆಮನೆಯವಳು.

ನಾಂದಿ: ಜಯ ಜಯ ಭಾರತ ದೇಶ ॥
ಜಯ ಜಯ ನಮ್ಮ ದೇಶ ॥ ಪಲ್ಲವಿ ॥
ಸೃಷ್ಟಿಯ ಮಾತೆಯೇ! ನಮಿಪೆವು ಕುವರರು ।
ಸುಖಸಂಪದವನು ನೀಡೋಽ ನಮಗೆ ।
ಜಯ ಜಯ ॥ ೧ ॥

ದೃಶ್ಯ ೧.

[ರಾಮಣ್ಣ ಭಟ್ಟನ ಕಾಫಿ ಹೋಟೆಲ್; ಕೇಶವ ಭಾವ, ಮಂಜಪ್ಪ, ದೂಮಣ್ಣ—ಕುಳಿತಿರುವರು. ರಾಮಣ್ಣನ ಕಾಫಿ ಉಪಚಾರ. ಅಷ್ಟರಲ್ಲೇ ಸಸಿಗಳನ್ನು ಹಿಡಿದುಕೊಂಡು ಶಿವರಾಯರ ಪ್ರವೇಶ.]

ರಾಮಣ್ಣ: ಶಿವರಾಯರಿಗೆ ಕಾಫಿಯೋ, ಚಹವೋ?

ಶಿವರಾಯ: ಹುಂ, ಕಾಫಿ. ಹೌದೋ ಕೇಶವ ಭಾವಾ, ಇಂದು ನಮ್ಮೂರಿನಲ್ಲಿ ಏನೆಲ್ಲಾ ಗಾಜಿ ಗೊತ್ತೆ?

ಕೇಶವ: ಏನು?

ಶಿವ: ನಾನು ಹೊಸಪೇಟೆಯಲ್ಲಿದ್ದೆ. ಡಂ, ಡಂ, ಡೋಲು ಕೇಳಿಸಿತು. ಒಟ್ಟಿಗೆ ಕೆಲವು ಜನರ ಗುಲ್ಲೂ ಕೇಳಿಸಿತು. ನಾನು—ಅದೊಂದು ಮದುವೆಯೋ—ಅಂದುಕೊಂಡೆ.

ಕೇಶವ: ಅಲ್ಲವೇ?

ಶಿವ: ತಡೆಯಿರಿ, ಕೊನೆಗೆ ವಿಚಾರಿಸುವಾಗ ಕಲೆಕ್ಟರರು ಬಂದಿದ್ದಾರೆ; ಜನರನ್ನೆಲ್ಲಾ ಸೇರಿಸಿ ಮೆರವಣಿಗೆ ಮಾಡುತ್ತಾರೆ—ಅಂತ ತಿಳಿಯಿತು. ಏನೆಲ್ಲಪ್ಪಾ ವಿಶೇಷ—ಎಂದು ಕೇಳಿಕೊಂಡೆ. ಬೇರೇನಿಲ್ಲ, ಈ ವಾರ ಸಸಿ ನೆಡುವ ವಾರವಂತೆ. ಶುರುಮಾಡುವುದಕ್ಕೆ ಕಲೆಕ್ಟರೇ ಸ್ವತಃ ನೆಡುತ್ತಾರಂತೆ—ನಾನೂ ಹೋದೆ. ತುಂಬಾ ಜನರು ಸೇರಿ ಸಸಿಗಳನ್ನು ನೆಡುತ್ತಿದ್ದರು. ನನ್ನನ್ನು ಕರೆದು ಒಂದು ಹಿಡಿ ಗರ್ಬೀಜವನ್ನೂ ಎರಡು ಲಿಂಬೆ ಸಸಿಗಳನ್ನೂ ಕೊಟ್ಟರು.

ಕೇಶವ: ಅದೇನೇ ನಿಮ್ಮ ಕೈಯಲ್ಲಿರುವುದು? ಎಷ್ಟು ಕೊಟ್ಟಿರಿ?

ಶಿವ: ಕ್ರಯಕ್ಕೇನೂ ಅಲ್ಲ. ಹಣಮಾಡುವುದಕ್ಕೆ ಅವರು ಕೊಡುವುದಲ್ಲ. ದೇಶದಲ್ಲಿ ಸಸ್ಯಸಮೃದ್ಧಿಯಾಗಬೇಕೆಂದು ಸಸಿಗಳನ್ನೂ ಬೀಜಗಳನ್ನೂ ಎಲ್ಲರಿಗೂ ಹಂಚುತ್ತಾರೆ. ನಮ್ಮ ದೇಶದಲ್ಲಿ ಸಸ್ಯಗಳು ಕಡಿಮೆಯಾಗಿವೆಯಂತೆ. ಅದಕ್ಕಾಗಿ ಸರಕಾರದವರು "ವನಮಹೋತ್ಸವ" ಎಂತ ಆಚರಿಸುತ್ತಾರೆ. ಮಂಜಪ್ಪ, ಕೇಳಿದೆಯಾ, ಸರಕಾರ ಈಗ ರೈತರ ಪಕ್ಷ ನೋಡು. ಬೇಕಾದಷ್ಟು ಸಹಾಯ ನೀಡುತ್ತದೆ.

ಮಂಜಪ್ಪ: ಹಾಗೆಂದರೇನು—ಸಹಾಯಾಂತ?—ಒಕ್ಕಲುಗಳಿಗೇನು?
(ಹೋಟೇಲಿನವನು ಕಾಫಿ-ದೋಸೆಗಳನ್ನು ತಂದಿರಿಸುವನು)

ಶಿವ: ಹೇಳುತ್ತೇನೆ, ನಿಲ್ಲೋ.

ಶಿವ: ನೋಡಿ ಭಾವಾ, ನಮ್ಮ ಅವಸ್ಥೆ. ಹಾಳು ದೋಸೆ! ರೇಶನ್ ಕಾಲದ ದುರವಸ್ಥೆ ಇನ್ನೂ ಹೋಗಿಲ್ಲ. ಸುಮ್ಮನೆ ಅಲ್ಲ, ಕಲೆಕ್ಟರರು ಹೇಳಿದ್ದು—ನಾವೇ ಇದಕ್ಕೆ ಕಾರಣಾಂತ.

ಕೇಶವ: ಅದನ್ನೇ ನಾನು ಹೇಳುವುದು. ನಾವು ಈಗ ಬೆಳೆಸುವುದು ಕಡಿಮೆ. ಚೆನ್ನಾಗಿ ಬೆಳೆಸಿದರೇನೇ ಬರಗಾಲವನ್ನು ಹೋಗಲಾಡಿಸಬಹುದು. ಸಸಿಗಳನ್ನು ಹೆಚ್ಚುಹೆಚ್ಚಾಗಿ ನೆಡಬೇಕು. ಬಂಜರು ಸ್ಥಳಗಳಲ್ಲಿ ಹೆಚ್ಚು ಉತ್ಪತ್ತಿ ತೆಗೆಯಬೇಕು ಎಂದು ವಿವರಿಸುತ್ತ, ಸರಕಾರದ ಬೆಂಬಲವನ್ನೂ ಒತ್ತಿಹೇಳಿದರು.

ಕೇಶವ: ರೈತರಿಗೆ ಯಾವ ತರದ ಸಹಾಯವೂ ಇಲ್ಲದ್ದರಿಂದಲೇ ಹೀಗಾಯಿತೆನ್ನಬೇಕು. ನೀವೇನೆನ್ನುತ್ತೀರಿ?

ಶಿವ: ಇನ್ನು ಈ ದುಸ್ಥಿತಿಯಿಲ್ಲ. ಸರಕಾರದವರು ರೈತರಿಗೆ ಪೂರ್ಣ ಬೆಂಬಲ ಕೊಡುತ್ತಾರೆಂದು ಕಲೆಕ್ಟರರು ಅಭಯವನ್ನಿತ್ತಿದ್ದಾರೆ. ಅದಲ್ಲದೆ ಅವರಿಗೆ ಗೊಬ್ಬರಕ್ಕಾಗಿ ಸಾಲ, ಒಳ್ಳೆಯ ಬೀಜ, ಸಸಿ ವಗೈರೆ ಕೃಷಿ ಇಲಾಖೆಯಿಂದಲೇ ಒದಗಿಸಿಕೊಡುತ್ತಾರೆ. ಅಲ್ಲಲ್ಲಿಗೆ ಬೇಕಾದಂತೆ ಸಲಹೆ ಕೊಡಲು ಡೆಮೊನ್‌ಸ್ಟ್ರೇಟರನ್ನು ನೇಮಿಸಿದ್ದಾರಂತೆ. ನೋಡಿ ಭಾವಾ, ನಮ್ಮ ಹಳ್ಳಿಯವರಿಗೆ ಏನು ತಿಳಿದಿದೆ? ಕಲೆಕ್ಟರರ ಭಾಷಣದಿಂದ ನನಗೆ ಇಷ್ಟಾದರೂ ತಿಳಿಯಿತು. ಮಂಜಪ್ಪ, ನಿನಗೆ ಈಗಲಾದರೂ ತಿಳಿಯಿತಲ್ಲ—ಬಡ ರೈತರಿಗಾಗಿಯೇ ಈ ಏರ್ಪಾಡು, ಅಲ್ಲದೆ ಮತ್ತಾರಿಗೂ ಅಲ್ಲ.

ಮಂಜಪ್ಪ: ಹುಂ. ಹುಂ, (ಎಂದು ಬಾಯ್ತೆರೆದುಕೊಂಡು ತಲೆ ಅಲ್ಲಾಡಿಸುವನು.)

ಕೇಶವ: ನಾನು ನಿಜವಾಗಿ ಇನ್ನು ಕಾಲಗತಿ ಕಷ್ಟಾಂತ ತಿಳಿದುಕೊಂಡಿದ್ದೆ. ಇಲ್ಲದಿದ್ದರೆ ನಮಗೆ—ಕೃಷಿಕರಿಗೆ ಯಾರು ಸಹಾಯ ಕೊಡುತ್ತಾರೆ? ಕಳೆದ ವರ್ಷದ ಹಾಗೆ ಪಡುಗದ್ದೆಯನ್ನು ಈ ವರ್ಷವೂ ಹಡಿಲು ಹಾಕುವುದೋ ಎಂದಿದ್ದೆ. ಇನ್ನು ನಿಶ್ಚಯ; ಈ ವರ್ಷ ಬೆಳೆಮಾಡಿಯೇ ತೀರಬೇಕು. ನಾಳೆಯೇ ಡೆಮೊನ್‌ಸ್ಟ್ರೇಟರಲ್ಲಿಗೆ ಹೋಗಿ ಸ್ವಲ್ಪ ಸಾಲವನ್ನಾದರೂ ಪಡೆಯಬೇಕೆಂದಿದ್ದೇನೆ.

ಶಿವ: ಒಳ್ಳೇದು ಭಾವಾ, ನೀವೇ ಕಂಡು, ಗೊಬ್ಬರಕ್ಕೂ ಸಹಾಯ ಕೇಳಿಕೊಳ್ಳಿ. ಹಾಗಾದರೆ ಇನ್ನೊಮ್ಮೆ ಮಾತನಾಡುವ.

ಕೇಶವ: ನಮಸ್ಕಾರ. (ಶಿವರಾಯನೂ ನಮಸ್ಕರಿಸಿ,ಹೊರಡುವನು.)

ಮಂಜಪ್ಪ: ದೂಮಣ್ಣ, ಅಂದು ನಮ್ಮ ಸರಕಾರಾಂತ ಹೇಳಿದರಲ್ಲ. ಈಗ ನಿಜವಾಗಿ ನಮ್ಮದೇ ಆಗಿದೆ. ನಮ್ಮ ಮನೆ ಮೇಲಿನ ಆ ಗುಡ್ಡದಲ್ಲಿಯೂ ರಾಗಿಯೋ ಜೋಳವೋ ಬೆಳೆಸಬಹುದು.

ದೂಮ: ಏ, ಅದು ಸರಕಾರಿ ಜಾಗಾಂತ ಕಾಣುತ್ತದೆ.

ಮಂಜ: ಹಾಗೇನಿಲ್ಲಣ್ಣಾ ಈಗ. ಅಲ್ಲಿಯೂ ಬೆಳೆಸಬಹುದು. ನಾವೇ ತಿನ್ನಬಹುದು.

ದೂಮ: ನಮ್ಮ ಕಾಂತಪ್ಪನಿಗೂ ಅವನ ಮನೆಯ ಹಿಂದುಗಡೆ

ತುಂಬಾ ಜಾಗ ಉಂಟಲ್ಲ. ಅವನಿಗೂ ತಿಳಿಸಿದರೆ—ನಾಲ್ಕು ಮಕ್ಕಳಿದ್ದಾರೆ—ಏನಾದರೂ ತರಕಾರಿ ಬೆಳೆಸಿ ತಿಂದಾರು. ಕೃಷಿ ಬಗ್ಗೆ ಸರಕಾರದವರು ಸಹಾಯ ಕೊಡುವದನ್ನು ತಿಳಿಸಬೇಕು. ನನಗೆ ಒಂದು ಸೇರು ಜೋಳದ ಬೀಜವನ್ನು, ಆ ಶಿವರಾಯರು ಹೇಳಿದರಲ್ಲ, ಡೆವಲಪ್ ಡೆವಲಪ್ ಆ ಕೃಷಿ ಇಲಾಖೆಯವರಿಂದ ಪಡೆದುಕೊಳ್ಳಬೇಕು.

ಮಂಜ: ಹೌದಣ್ಣಾ, ರೇಶನ್ ಬಂದಾಗ ನಮಗೆಲ್ಲಿ ಸಾಕಾಗುತಿತ್ತು? ನೋಡುವ, ಈ ವರ್ಷ ತುಂಬ ತರಕಾರಿ ಬೆಳೆಸಬೇಕು. ನಾವೇ ಹೆಚ್ಚು ಬೆಳೆಸಿದರೆ ಹೊಟ್ಟೆತುಂಬೀತು. ಇನ್ನು ಹೊರಡೋಣ (ಹೊರಡುವರು.) (ತೆರೆ.)

ದೃಶ್ಯ ೨

[ದಾರಿಯಲ್ಲಿ ವಿಚಾರಪರನಾದ ಮಂಜಪ್ಪನನ್ನು, ನೇಗಿಲನ್ನು ಹಿಡಕೊಂಡ ಕಾಂತಪ್ಪನು ಕಾಣುತ್ತಾನೆ.]

ಕಾಂತಪ್ಪ: ಹೋ, ಮಂಜಪ್ಪಣ್ಣ ದೂರ ಹೊರಟದ್ದು?

ಮಂಜ: ಯಾರು, ಕಾಂತಪ್ಪಣ್ಣನೇ? ಪೇಟೆಯ ವರೆಗೆ ಹೋಗಿದ್ದೆ.

ಕಾಂತ: ವಿಶೇಷವೇನೂ ಇಲ್ಲವಷ್ಟೆ?

ಮಂಜ: ವಿಶೇಷವೇ? ರಾಮಣ್ಣ ಭಟ್ಟರಲ್ಲಿಗೆ ಹೋದಾಗ ಆ ಶಿವರಾಯರು ಹೇಳಿದರು—ನಮಗೆಲ್ಲಾ ಹಬ್ಬವೇ ಹಬ್ಬವಂತೆ. ಈ ವಾರ ನಮ್ಮೂರಲ್ಲಿ ಚೆನ್ನಾಗಿ ಸಸಿ ನೆಡಬೇಕು; ಕಲೆಕ್ಟರರೇ ಸ್ವತಃ ನಮ್ಮೂರಿಗೆ ಬಂದು ಬೀಜಗಳನ್ನೂ ಸಸಿಗಳನ್ನೂ ಎಲ್ಲ ಧರ್ಮಾರ್ಥವಾಗಿ ಹಂಚಿದ್ದಾರಂತೆ. ಅವರೇ ಖುದ್ದು ಎಲ್ಲರ ಎದುರು ಒಂದು ಮಾವಿನ ಸಸಿಯನ್ನು ನೆಟ್ಟರಂತೆ. ಒಂದು ದೊಡ್ಡ ಭಾಷಣದಲ್ಲಿ—ಊರವರೆಲ್ಲಾ ಗುಡ್ಡಗಳಲ್ಲಿ ಗಿಡಗಳನ್ನು ನೆಟ್ಟು ಕಾಡನ್ನೇ ಬೆಳೆಸಬೇಕೆಂದಿದ್ದಾರೆ. ನೋಡು ಕಾಂತಣ್ಣ, ಈಗ ಈ ಮರಗಳನ್ನೆಲ್ಲಾ ಕಡಿದು ಕಡಿದು ನಾವು ಸೊಪ್ಪು ಸೌದೆಗೆ ಎಲ್ಲಿಗೆ ಓಡುವುದು?

ಕಾಂತ: ಅದೆಲ್ಲಾ ಹೌದು ಮಂಜಪ್ಪಣ್ಣಾ, ನಾನೀಗ ಸಸಿ ನೆಟ್ಟರೆ ಕಾಡಾಗುವುದು ಯಾವಾಗ? ಅನಂತರ ತಾನೇ ಸೊಪ್ಪು ಸೌದೆ!

ಮಂಜ: ಆಗಲಿ, ನೀನು ಬೇಸಾಯ ಮಾಡುತ್ತೀಯಷ್ಟೆ? ನೆಟ್ಟ ಕೂಡಲೇ ನಿನಗೆ ಬೆಳೆ ಕೈಗೆ ಸಿಕ್ಕಿತೇ? ಹಾಗಲ್ಲವೇ, ನಿನಗಲ್ಲದಿದ್ದರೂ ನಿನ್ನ

ಮಕ್ಕಳ ಕಾಲಕ್ಕಾದರೂ ಕಾಡಾಗಿಯೇ ತೀರುತ್ತದೆ. ಈಗ ನಮ್ಮ ಅಜ್ಜಂದಿರಿಗೆ ಈ ಆಲೋಚನೆ ಹುಟ್ಟುತ್ತಿದ್ದರೆ ನಮ್ಮ ಪಾಡು ಹೀಗಾಗುತ್ತಿತ್ತೇ?

ಕಾಂತ: ಅವರೂ ನೀನೂ ಹೇಳುವುದು ಸರಿ—ಎಂತ ನಾನು ಒಪ್ಪುತ್ತೇನೆ. ಆದರೆ, ನಾನು ಸಸಿಗಳನ್ನೆಲ್ಲಿ ನೆಡಲಿ? ಮನೆಯೊಳಗೆ ನೆಡಲೋ? ನನಗೆ ಒಂದು ಜಾಗ ಬೇಕಲ್ಲಾ? ನೋಡು, ನಿನಗೆ ಗೊತ್ತಿಲ್ಲವೇ?

ಮಂಜ: ನಿನ್ನ ಮನೆಯ ಹಿಂದೆ ಚಾಚಿರುವುದು ಅದು ಜಾಗವಲ್ಲವೇ? ಅದರಲ್ಲಿ ನೆಟ್ಟು ಮಾಡಲಿಕ್ಕೆ ಯಾರ ಅಡ್ಡಿ?

ಕಾಂತ: ಅದರಲ್ಲಿ ನೆಟ್ಟರೆ ನಿನಗೂ ಕೊಯ್ಯಬಹುದು, ಅದು ಸರಕಾರಿ ಜಾಗ ಅಲ್ಲವೇನಣ್ಣಾ?

ಮಂಜ: ಏ ಪೆದ್ದೆ, ಈಗ ಸರಕಾರ ನಮ್ಮದು. ಮೊನ್ನೆ ಶ್ಯಾನುಭಾಗರು ಹೇಳಿದ್ದಾರೆ—ಸರಕಾರಿ ಸ್ಥಳದಲ್ಲಿ ಬೆಳೆಸಿಕೊಳ್ಳಬಹುದು ಎಂತ. ಆಗ ಶಿವರಾಯರೂ ಹೇಳಿದರು—ದೊರೆಗಳ ಭಾಷಣದಲ್ಲಿ, ಬಡ ಜನರಿಗೆ ಉಪಯೋಗಿಸಬಹುದು ಎಂತ ಹುಕುಂ ಕೊಟ್ಟಿದ್ದಾರಂತೆ. ಬೇಲಿಹಾಕಿ ಬೆಳೆಸಿ ತಿಂದುಕೊಳ್ಳಬಹುದು. ಯಾರ ಅಡ್ಡಿಯೂ ಇಲ್ಲಣ್ಣಾ—ಹೆದರಬೇಡ.

ಕಾಂತ: ಹಾಗಾದರೆ ನಾವೇ ಮೇಲಣ್ಣಾ.

ಮಂಜ: ಇನ್ನು ಕೈಗೂ ಮೊಸರು ಬಾಯಿಗೂ ಮೊಸರು, ತೆಗೊ. ನಾನೀಗ ಹೋಗಲೋ?

ಕಾಂತ: ಹುಂ. (ಹೊರಟವನನ್ನು ತಡೆದು,) ಗೆಣಸೋ, ಮೆಣಸೋ ಮಾಡುತ್ತೇನೆ. ಬರುವ ವರ್ಷಕ್ಕೆ ರಾಗಿ ಮಾಡೋಣ. ಎತ್ತುಬಿತ್ತಿಗೆ ಏನುಮಾಡುವುದು, ಹೇಳು.

ಮಂಜ: ನನಗೂ ತಿಳಿದದ್ದು ಇವತ್ತೇ ಕಾಂತಪ್ಪಣ್ಣ. ಪೇಟೆಯಲ್ಲಿ ನಮಗೆ ಸಹಾಯಕ್ಕೆ ಕೃಷಿ ಇಲಾಖೆಯವರಿದ್ದಾರಂತೆ. ಬೇಕಾದರೆ ನೀನು ನಾಳೆ ಹೋಗಿ ವಿಚಾರಿಸುವಾಗ ಗೊತ್ತಾಗುತ್ತದೆ. ಬೀಜ ಮಾತ್ರವೇ ಅಲ್ಲ—ಒಂದು ಸಮಯ ಹಣ ಸಾಲ ಬೇಕಾದರೂ ಕೊಡುತ್ತಾರಂತೆ.

ಕಾಂತ: ಇದರ ವಿವರ ಸರಿಯಾಗಿ ತಿಳಿಯುವ ಬಗೆ ಹೇಗೆ?

ಮಂಜ: (ವಿಚಾರಮಾಡಿ) ಅವರನ್ನೇ—ಶಿವರಾಯರನ್ನೇ ಕೇಳೋಣ. ಇಷ್ಟಾದರೂ ನನಗೆ ತಿಳಿದದ್ದು ಅವರಿಂದಲೇ. ಅವರು ಈಗ ಮನೆಯಲ್ಲಿರ

ಬಹುದು. ಸೀದಾ ಅಲ್ಲಿಗೇ ಹೋಗಿಬಿಡುತ್ತೇನೆ. ಮತ್ತೆ ಕಾಣುವ. (ಹೋಗುವನು.)

ಕಾಂತ: ಆಯಿತು. ತಿಳಿದು, ನನಗೆ ಹೇಳಬೇಕು. ಮರೆಯಬೇಡಣ್ಣಾ. (ಮಂಜಪ್ಪನು ಹೋದ ಬಳಿಕ, ಸಂತೋಷದಿಂದ ಕುಣಿಯುತ್ತಾನೆ.)

(ಪದ್ಯ)

ಹ, ಹ, ಹಾ! ನಮ್ಮದೆ ಸರಕಾರ-
ನಮಗೆ ಕೊಡುತಿದೆ ಸಹಕಾರ! ‖ ಪಲ್ಲವಿ ‖
ಗೆಯ್ಯಲು ಜಾಗ, ಬಿತ್ತಲು ಬೀಜ,
ನೆಡಲದೊ ಸಸಿಗಳು—ಎಲ್ಲವ ಕೊಡುವರು
ಕಯ್ ಕೆಸರಾದರು ಬಾಯ್ ಮೊಸರು ‖ ೧ ‖

(ತೆರೆ)

ದೃಶ್ಯ ೨

[ಕೈಯಲ್ಲಿ ಬೀಜದ ಕಟ್ಟುಗಳನ್ನೂ ಸಸಿಗಳನ್ನೂ ಹಿಡಿದುಕೊಂಡು ಶಿವರಾಯನು ಪ್ರವೇಶಿಸಿ,]

ಶಿವ: ಲೇ ಪಾರು, ಪಾರೂ,

[ಪಾರಮ್ಮನ ಪ್ರವೇಶ.]

ಪಾರು: ಓ, ಬಂದೆ. ಆಳು ಬಂದು ಗಂಟೆ ಒಂದಾಯಿತು. ನೀವೆಲ್ಲಿದ್ದೀರಿ?

ಶಿವ: ಮಾರ್ಕೆಟ್ ರಸ್ತೆಯಲ್ಲಿ ಒಂದು ಮೆರವಣಿಗೆ ಇತ್ತು. ಅದು ಏನೂಂತ............

ಪಾರು: (ಮಧ್ಯೇ ಬಾಯಿಹಾಕಿ,) ಅಲ್ಲ, ನಾನು ಹೇಳುವುದು—ಗಂಡಸರಿಗೆ ಮನೆ ವಿಚಾರ ಏನೂ ಇಲ್ಲಾಂತ. ಹೋದರೆ ಹೋದಲ್ಲೇ—ಏನು ಮೆರವಣಿಗೆಯೋ, ಏನು ದಿಬ್ಬಣವೋ?........

ಶಿವ: (ನಸು ಸಿಟ್ಟಿನಿಂದ) ವಿಚಾರ, ವಿಚಾರ, ಮನೆಯಲ್ಲಿ ಕುಳಿತು ಅಡಿಗೆಮಾಡುವುದೇ ವಿಚಾರ? ನಾನೇನೂ ಬಸವನಂತೆ ತಿರುಗಾಡಲಿಲ್ಲ. ಕಲೆಕ್ಟರರ ಭಾಷಣ ಇದೆ ಎಂದು ಹೋದೆ. ಏನೆಲ್ಲಾ ವಿಶೇಷ ನಡೆಯಿತು–

ಅಂತ ನಿನಗೆ ಗೊತ್ತೇ? ಹೇಳುವುದಕ್ಕೆ ಮೊದಲು ಆರಂಭವಾಯಿತಲ್ಲ ಅವಳ ತರಾತುರಿ.

ಪಾರು: ಆಯಿತಪ್ಪಾ, ಕ್ಷಮಿಸಿರಿ. ನಿಮ್ಮಾ ಕಲೆಕ್ಟರರು ಬೇಕಾದ್ದು ಏನು ಹೇಳಿದರು?

ಶಿವ: ನಮಗೆ ಬೇಕಾದ್ದನ್ನೇ ಹೇಳಿದ್ದಾರೆ. ವನಮಹೋತ್ಸವ—ಅಂತೆ. ಕೃಷಿಕರ ಕಷ್ಟನಿವಾರಣೆಯಾದರೇನೇ ದೇಶದ ಉದ್ಧಾರ. ಅದನ್ನು ಸೂಚಿಸುವುದಕ್ಕಾಗಿಯೇ ಈ ವಾರ ಸಸಿ ನೆಡುವ ವಾರವೆಂತ ಆಚರಿಸುತ್ತಾರೆ. ರೈತರಿಗೆಲ್ಲಾ ಸಸಿಗಳನ್ನೂ ಬೀಜಗಳನ್ನೂ ಸರಕಾರದಿಂದಲೇ ಹಂಚುತ್ತಾರೆ, ನನಗೂ ಇಷ್ಟು ಗರ್ಬೀಜವನ್ನೂ ಎರಡು ಸಸಿಗಳನ್ನೂ ಕೊಟ್ಟರು. ಅದೇ ನೋಡು ನನ್ನ ಕೈಯಲ್ಲಿರುವುದು. (ಎಂದು ಕಟ್ಟುಗಳನ್ನೂ ಸಸಿಗಳನ್ನೂ ಕೆಳಗಿಡುವನು.)

ಪಾರು: (ಕಟ್ಟುಗಳನ್ನು ತೆಗೆದು ಬಿಡಿಸಿ ನೋಡಿ) ಓ, ಇದರಲ್ಲಿ ಒಂದು ಗರ್ಬೀಜ, ಮತ್ತೊಂದು ಅಲಸಂಡೆ. ಚಲೋದಾಯಿತು. ಮಧ್ಯಾಹ್ನದ ಊಟಕ್ಕೆ ಏನು ಮಾಡುವುದು—ಅಂತ ಇದ್ದೆ. ಗರ್ಬೀಜವನ್ನು ಬೇಯಿಸಿ ಅರೆದು ಒಂದು ಗರಂ ಸಾರನ್ನೂ, ಅಲಸಂಡೆ ಒಗ್ಗರಿಸಿ ಒಂದು ಪಲ್ಯವನ್ನೂ ಮಾಡುತ್ತೇನೆ. ಊಟಕ್ಕೆ ಪಸಂದ ಆಯಿತು!

ಶಿವ: ಏ ಚೆನ್ನಾಯಿತು. ಸಾರುಮಾಡುವುದಕ್ಕೆ ನಿನ್ನ ಅಪ್ಪ ಕಳುಹಿಸಿದ್ದಲ್ಲ. ಊರಲ್ಲಿ ಬೆಳೆ ಆಗಲಿ ಎಂತ ಕಲೆಕ್ಟರು ಅದನ್ನು ಬಿತ್ತಿ ಬೆಳೆಸಲಿಕ್ಕೆ ಕೊಟ್ಟದ್ದು. ನಿನ್ನ ಹಾಗಿರುವವರು ದೇಶದಲ್ಲಿದ್ದರೆ ಭಾರಿ ಉದ್ಧಾರವಾದೀತು, ಕಾಣೋ.

ಪಾರು: ನೀವೇ ಉದ್ಧಾರಮಾಡುವವರು! ಹಾಗಿರುವವರು ಪರಿಮಳಕ್ಕೆ ಒಗ್ಗರಣೆಕೊಡಲಿಕ್ಕೆ ಒಂದು ನುಗ್ಗೆ ಸಸಿಯನ್ನಾದರೂ ನೆಟ್ಟರೆ? ನನಗೆ ಹೇಳಿ ಹೇಳಿ ತಲೆಬಡಿದುಕೊಂಡು ಸಾಕೋಸಾಕಾಯಿತು. ನಿಮಗೆ ತಿಳಿಯಬೇಕಾದರೆ ಆ ಕಲೆಕ್ಟರರೇ ಹೇಳಬೇಕು.

ಶಿವ: ನಿನ್ನ ನುಗ್ಗೆ ಸಸಿ ನೆಟ್ಟರಾಯಿತೋ? ಅಲ್ಲಿ ಗದ್ದೆ ಕೆಲಸ ಹಾಗೇ ಕೊಳೆಯುತ್ತದೆ. ಹೇಗೂ ಆಯಿತು. ಅಲ್ಲಿ ಆ ಕಲೆಕ್ಟರರ ಹುಕುಂ ಆಯಿತು; ಇಲ್ಲಿ ಈ ಕಲೆಕ್ಟರರ ಹುಕುಂ ಆಯಿತು. ಇದೇ ಸಸಿನೆಡುವ ವಾರ! ಎಲ್ಲಾ ಸಸಿಗಳನ್ನೂ ನೆಟ್ಟುಬಿಡುತ್ತೇನೆ. ಇದೇ ಸುಮುಹೂರ್ತ.

[ಪಾರಮ್ಮ ನುಗ್ಗೆ ಸಸಿಯನ್ನು ತಂದುಕೊಡುವಳು. ನುಗ್ಗೆ ಸಸಿ ಮತ್ತು ತಾನು ತಂದ ಸಸಿಗಳನ್ನು ತೆಗೆದುಕೊಂಡು,]

ಶಿವ: ಶುಭಸ್ಯ ಶೀಘ್ರಂ. [ಎಂದು ಹೇಳುತ್ತಾ ಎರಡು ಹೆಜ್ಜೆ ಮುಂದಿಡುವನು.]

ಪಾರು: ಹಾಂ, ಸಾಂಬಾರು ಒಲೆಯಲ್ಲೇ. [ಒಳಗೆ ಹೋಗುವಳು.]

[ಶಿವರಾಯನ ಇದುರಾಗಿ ಮಂಜಪ್ಪನ ಪ್ರವೇಶ]

ಮಂಜ: ಏನ್ರೀ ರಾಯರೇ! ಏನು ಶುಭಕಾರ್ಯದಲ್ಲಿ ಹೊರಟಿದ್ದೀರಿ?

ಶಿವ: ಇದೇ, ಇದೇ ಶುಭಕಾರ್ಯ ನೋಡು. ಈ ವಾರ ವನಮಹೋತ್ಸವ ಅಂತ ಇಷ್ಟು ಬೇಗನೇ ಮರೆತುಬಿಟ್ಟೆಯಾ? ಬಾ, ನೀನೂ ಎರಡು ಸಸಿಗಳನ್ನು ತೆಕ್ಕೊಂಡು ನೆಡು. ನಮ್ಮ ದೇಶ ಇನ್ನಾದರೂ ಉದ್ಧಾರವಾಗಲಿ.

ಮಂಜ: ಬರುತ್ತೇನೆ. ಈ ವಿಷಯ ಎರಡು ಮಾತು ಕೇಳಬೇಕೂಂತ ಇಲ್ಲಿಯ ವರೆಗೆ ಬಂದೆ. ಅಲ್ಲಿ, ಹೋಟೆಲಿನಲ್ಲಿ ಏನೋ ಹೇಳಿದಿರಿ. ನನ್ನ ತಲೆಗೆ ಏನೂ ಹೋಗಲಿಲ್ಲ. ಒಮ್ಮೆ ಅದರ ಸಂಗತಿ ಹೇಗೆ ಅಂತ ಹೇಳಿಬಿಡಿ ರಾಯರೇ.

ಶಿವ: ನನಗೂ ಗೊತ್ತು ಇಷ್ಟೆ—ಕಲೆಕ್ಟರರು ಸಸಿಗಳನ್ನು ಹಂಚುತ್ತಾ ಹೇಳಿದ್ದೇನೆಂದರೆ—ನಮ್ಮ ದೇಶದಲ್ಲಿ ಕಾಡು ಬೆಳೆದು ವೃಕ್ಷಸಂಪತ್ತು ಹೆಚ್ಚಾಗಬೇಕು. ಅದು ಮಳೆಗೂ ಅವಶ್ಯ. ಊರಲ್ಲಿ ಬೆಳೆ ಚೆನ್ನಾಗಿ ಬೆಳೆದು ನಮ್ಮ ಕ್ಷಾಮ ನಿವಾರಣೆಯಾಗಬೇಕು—ಎಂದು. ಅದಕ್ಕೆ ರೈತರ ಸಹಕಾರ ಅಗತ್ಯ. ಈ ವಾರ ಎಲ್ಲರೂ ಸೇರಿ ಸಸಿ ನೆಡಬೇಕೆಂದು ಹುಕುಂ ಆಗಿದೆ.

ಮಂಜ: ಅದು ಹೌದು ರಾಯರೇ, ಕಾಡು ಬೆಳೆದರೆ ಬೇಕಾದಷ್ಟು ಹಣ್ಣಾದರೂ ತಿನ್ನಬಹುದಲ್ಲ!

ಶಿವ: ಹಣ್ಣು ಯಾಕೋ, ಉರಿಸಲಿಕ್ಕೆ ಕಟ್ಟಿಗೆ, ಗದ್ದೆಗೆ ಸೊಪ್ಪು ಎಲ್ಲಾ ಆಯಿತು.

ಮಂಜ: ಉರಿಸಲಿಕ್ಕಾದರೂ ಬೆರಣಿ ಉಂಟು........

ಶಿವ: (ತಡೆದು) ಹಾ, ಅದೇ--ಹಳ್ಳಿಯವರು ಗೊತ್ತಿಲ್ಲದೇ ಹಾಳು ಮಾಡಿಕೊಳ್ಳುವುದು. ಸೆಗಣಿಯನ್ನೆಲ್ಲಾ ಬೆರಣಿ ಮಾಡಿ ಹೊತ್ತಿಸಿದರೆ ಗದ್ದೆಗೆ ಗೊಬ್ಬರ ಹಾಕುವುದೇನನ್ನು? ಸುಟ್ಟ ಕೂಡಲೇ ಸೆಗಣಿಯ ಸಾರ ಇಡೀ ಹೋಗುತ್ತದಂತೆ.

ಮಂಜ: ಹೌದು ರಾಯರೇ, ನಮ್ಮಂತಹವರಿಗೆ ಇದು ಹೇಗೆ ಗೊತ್ತು? ಕಟ್ಟಿಗೆ ಇಲ್ಲದಿದ್ದರೆ ಬೆರಣಿ ಸುಡುತ್ತೇವೆ. ಲಾಭವೋ-ನಷ್ಟವೋ, ಎಲ್ಲಾ ತಿಳಿದವರಿಗೆ.

ಶಿವ: ನೋಡು ಮಂಜಪ್ಪ, ಇದು ಗೊಬ್ಬರದ ಸಸಿ. ನೆಟ್ಟ ಮೂರು ವರ್ಷಗಳಲ್ಲೇ ದೊಡ್ಡ ಕಾಡೇ ಬೆಳೆದುಬಿಡುತ್ತದೆ.

[ಅಷ್ಟರಲ್ಲೇ ಎಗ್ರಿಕಲ್ಚರಲ್ ಡೆಮೋನ್ಸ್ಟ್ರೇಟರರ ಪ್ರವೇಶ].

ಶಿವ: ನಮಸ್ಕಾರ ಸ್ವಾಮಿ, ಕುಳಿತುಕೊಳ್ಳಿ.

ಡೆಮೋ: ನಮಸ್ಕಾರ. ಶಿವರಾಯರೆಂದರೆ ನೀವೇ ತಾನೇ? [ಕುಳಿತುಕೊಳ್ಳುವನು.]

ಶಿವ: ಹೌದು. ತಮ್ಮ ಪರಿಚಯ........

ಡೆಮೊ: ನನ್ನ ಪರಿಚಯ ನಿಮಗಿರಲಿಕ್ಕಿಲ್ಲ. ಮೊನ್ನೆ ತಾನೇ ಇಲ್ಲಿಗೆ ವರ್ಗವಾಯಿತು. ಎಲ್ಲಾ ಎಗ್ರಿಕಲ್ಚರಲ್ ಡೆಮೋನ್ಸ್ಟ್ರೇಟರರೂ ಹಳ್ಳಿ ಹಳ್ಳಿಗೆ ಹೋಗಿ ವನಮಹೋತ್ಸವದ ವಿಷಯ ತಕ್ಕ ಸಲಹೆ ಕೊಡಬೇಕೆಂದು ಮೇಲಿಂದ ಹುಕುಂ ಬಂದಿದೆ. ಹಾಗೆ, ನಾನು [illegible] ಊರಲ್ಲಿ ನಿಮ್ಮ ಹೆಸರು ಕೇಳಿ ಇಲ್ಲಿಗೆ ಬಂದೆ. [illegible] ವಾರ ಸಸಿಗಳನ್ನು ನೆಡಬೇಕೆಂದು ನಿಮಗೆಲ್ಲಾ ತಿಳಿದಿದೆಯಷ್ಟೆ?

ಶಿವ: ನಿನ್ನೆ ತಾನೆ ಅದರ ವಿವರ ತಿಳಿದೆ. ನಿಮ್ಮನ್ನು ಕಂಡು ಅದರ ಸಂಪೂರ್ಣ ವಿವರ ಕೇಳಬೇಕೆಂದಿದ್ದೆ. ಅದೇ ಸಮಯಕ್ಕೆ ನೀವೇ ಇಲ್ಲಿಗೆ ಬಂದುದು ಬಹಳ ಒಳ್ಳೆಯದೇ ಆಯಿತು. ಮಂಜಪ್ಪನೂ ಇದನ್ನೆ ತಿಳಿಯ ಬೇಕು ಎಂದು ಬಹಳ ಆಗ್ರಹದಿಂದಿದ್ದಾನೆ.

ಡೆಮೊ: ನೀವೇ ಇಷ್ಟು ಉತ್ಸಾಹದಿಂದ ಇದ್ದುದು ಸಂತೋಷವೇ. ನಿಮ್ಮೆಲ್ಲರ ಸಹಕಾರವಿದ್ದರೆ ಖಂಡಿತವಾಗಿಯೂ ವನಮಹೋತ್ಸವವು ಯಶಸ್ವಿಯಾಗಿಯೇ ತೀರುತ್ತದೆ. ಮುಖ್ಯತಃ ಇದನ್ನು ಆಚರಿಸಲು ನಮ್ಮ ದೇಶದ ಬರಗಾಲವೇ ಕಾರಣ. ಅಲ್ಲಲ್ಲಿ ಕಾಡುಗಳನ್ನು ನಾಶಪಡಿಸಿದ್ದರಿಂದ ಊರಿಗೆ ಮಳೆ ಇಲ್ಲದಾಯಿತು. ಇನ್ನು ಬೆಳೆ ಹೇಗೆ ಸಾಧ್ಯ? ಅದರ ಪ್ರತಿಫಲವೇ ಈ ಬರಗಾಲ.

ಮಂಜ: ಕಾಡಿದ್ದರೆ ಮಳೆ ಬರುವುದು ಹೇಗೆ ದೊರೆಗಳೇ?

ಡೆಮೊ: ಅದನ್ನೇ ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ಕಾಡಿದ್ದರೆ

ಅಲ್ಲಿನ ಶೀತಲ ವಾತಾವರಣದಲ್ಲಿ ಮೋಡಗಳು ತಂಗತ್ತ ಮಳೆಯನ್ನು ಕಾಲಕ್ಕೆ ತಕ್ಕಂತೆ ಸುರಿಸುತ್ತವೆ; ಹೊರತು ಕಾಡು ಕಡಿಯುವುದನ್ನು ಇನ್ನೂ ಮುಂದುವರಿಸಿದರೆ ಬೇಗನೇ ನಮ್ಮ ದೇಶವು ಮರಳು-ಭೂಮಿಯಾಗುವುದು

ಶಿವ: ಹಾಗಾದರೆ ಈಗ ಬೇಗನೇ ಕಾಡನ್ನು ಬೆಳೆಯುವ ಬಗೆ ಹೇಗೆ?

ಡೆಮೊ: ಇದಕ್ಕಾಗಿಯೇ ನಾವು ಪ್ರಯತ್ನ ಪಡಬೇಕಾದ್ದು. ಶೀಘ್ರವಾಗಿ ಬೆಳೆಯುವ ಸಸಿಗಳನ್ನು ಅದಷ್ಟು ನೆಡಬೇಕು. ಫಲಕೊಡುವ ಮರಗಳನ್ನು ತುಂಬಾ ಬೆಳೆಸಬೇಕು. ಎಲ್ಲಕ್ಕೂ ಮುಖ್ಯವಾಗಿ ಈಗ ಇರುವ ಕಾಡನ್ನು ಕಡಿಯದೇ ರಕ್ಷಿಸುವುದು ಅಗತ್ಯ. ಹಾಗಾಗಲು, ಒಮ್ಮೆಲೇ ಕಾಡು ಬೆಳೆದು ನಮ್ಮ ದೇಶವು ಸಸ್ಯಸಮೃದ್ಧವಾಗುವುದರಲ್ಲಿ ಸಂದೇಹವೇ ಇಲ್ಲ.

ಶಿವ: ಕುಳಿತು ಆಲೋಚಿಸುವಾಗ ಕಾಡಿನ ಅಭಾವದಿಂದಲೇ ಗೊಬ್ಬರಕ್ಕೆ ಇಷ್ಟು ಕಷ್ಟವುವೆಂದು ಕಾಣುತ್ತದೆ.

ಡೆಮೊ: ಕೃಷಿ ಇಲಾಖೆಯವರು ಇದನ್ನೂ ಸರಿಯಾಗಿ ತಿಳಿದಿರುವರು. ರೈತರ ಸಹಾಯಕ್ಕಾಗಿ ರಾಸಾಯನಿಕ ಗೊಬ್ಬರಗಳನ್ನೂ ತರಿಸಿ ಹಂಚುವ ಏರ್ಪಾಡು ಮಾಡಿದ್ದೇವೆ. ಎಮೋನಿಯಂ ಸಲ್ಫೇಟು, ಸೂಪರ್ ಫೋಸ್ಫೇಟು, ಬೋನ್ ಮೀಲ್, ಫಿಶ್ ಮೀಲ್ ಮುಂತಾದುವುಗಳನ್ನು ಈಗ ತರಿಸಿದ್ದೇವೆ. ನೆಲಗಡಲೆ ಹಿಂಡಿ, ಹರಳು ಹಿಂಡಿಗಳನ್ನೂ ಹಂಚುತ್ತೇವೆ. ಆದರೂ ಹಸುರೆಲೆ ಗೊಬ್ಬರವಿಲ್ಲದೆ ಬೆಳೆಯು ಅಷ್ಟು ಫಲವತ್ತಾಗದು. ಈಗ ಸದ್ಯದ ಮಟ್ಟಿಗೆ ಕಂಪೋಸ್ಟ್ ಗೊಬ್ಬರವನ್ನು ತಯಾರಿಸಬೇಕಾಗಿದೆ. ನಾವು ದಿನಾಲೂ ಸುತ್ತುಮುತ್ತಲೂ ಬಿಸಾಡುವ ಕಸಗಳನ್ನು ಸೇರಿಸಿ ಹೊಂಡದಲ್ಲಿ ಇರಿಸಿ ಮುಚ್ಚಿದರೆ, ಅದೇ ರಸವತ್ತಾದ ಗೊಬ್ಬರವಾಗುವುದು.

ಮಂಜ: ಹಾಗಾದರೆ ದೊರೆಗಳೇ, ದನದ ಗೊಬ್ಬರ ಒಳ್ಳೆಯದೋ,-- ಅಲ್ಲ ನೀವು ಈಗ ಹೇಳಿದ ಆ ಗೊಬ್ಬರ ಒಳ್ಳೆಯದೋ?

ಡೆಮೊ: ನಿಜವಾಗಿ ದನದ ಗೊಬ್ಬರವೇ ಉತ್ತಮ. ಆದರೆ ಇನ್ನು ಒಮ್ಮೆ ಕಾಡು ಬೆಳೆಯುವಲ್ಲಿಯ ವರೆಗೆ ರಾಸಾಯನಿಕ ಗೊಬ್ಬರವಿಲ್ಲದೆ ಉಪಾಯವಿಲ್ಲ. ವೈಜ್ಞಾನಿಕ ರೀತಿಯಿಂದ ನೋಡುವಾಗ ಕೃತಕಗೊಬ್ಬರಗಳಲ್ಲಿ ಕೆಲವಂಶ ಗುಣಗಳು ಹೆಚ್ಚಿವೆ. ಆದರೆ, ದನದ ಗೊಬ್ಬರ ಬಡ ರೈತರಿಗೆ ಸುಲಭ. ಕಂಪೋಸ್ಟ್ ಗೊಬ್ಬರವಾದರೋ, ಎಲ್ಲರಿಗೂ ಸುಲಭ.

ಅಲ್ಲದೆ, ಇತರ ಗೊಬ್ಬರಗಳಂತೆಯೇ ಸಾರವತ್ತಾಗಿಯೂ ಇದೆ. ಅದರಿಂದ ಬೇರೆ ಪ್ರಯೋಜನವೂ ಇದೆ—ರೋಗಕ್ಕೆ ಕಾರಣವಾದ ಸುತ್ತುಮುತ್ತಲಿನ ಕೊಳಕು ದೂರವಾಗಿ ಮನೆಯೂ ವಠಾರವೂ ಶುಚಿಯಾಗುವುದು. ಆರೋಗ್ಯ ದೃಷ್ಟಿಯಲ್ಲೂ ಅಗತ್ಯ; ಕೃಷಿಯ ರೀತಿಯಲ್ಲೂ ಅಗತ್ಯ.

ಶಿವ: ಸ್ವಾಮಿ, ಕಲೆಕ್ಟರರು ಹೇಳುತ್ತಾರಲ್ಲ—ನಮ್ಮ ದೇಶ ಆಹಾರದಲ್ಲಿ ಸ್ವಾವಲಂಬಿಯಾಗಿರಬೇಕೆಂದು; ಬೇರೆ ಬೇರೆ ದೇಶಗಳಿಂದ ತರಿಸಬಾರದಂತೆ. ಇಷ್ಟು ಜನಸಂಖ್ಯೆಯಿರುವ ಈ ದೇಶದಲ್ಲಿ ಇದು ಹೇಗೆ ಸಾಧ್ಯ? ನನಗೊಂದೂ ತಿಳಿಯುವುದಿಲ್ಲ.

ಡೆಮೊ: ಶಿವರಾಯರೇ, ನಮ್ಮ ಭೂಸ್ಥಿತಿಯನ್ನು ನೋಡಿದರೆ ನೀವೇ ಹೇಳುವಿರಿ. ಪ್ರಕೃತಿ ಸಂಪತ್ತು ತುಂಬಿರುವ ಈ ದೇಶದಲ್ಲಿ ಬರವನ್ನು ಬರಿಸುವುದೇ ನಮ್ಮ ಮೂಢತನ. ಬಂಜರಾದ ಸ್ಥಳಗಳು ಎಷ್ಟಿವೆ! ಇವುಗಳಲ್ಲಿ ಬೇಸಾಯ ಮಾಡಿದರೆ ತನ್ನಷ್ಟಕ್ಕೇ ಬರವು ದೂರವಾಗುವುದು. ತುಂಬಾ ಕಡೆಗಳಲ್ಲಿ ನದಿಯ ಅನುಕೂಲತೆಯಿದೆ. ನೀರಿನ ಪಂಪುಸೆಟ್ಟುಗಳನ್ನು ಉಪಯೋಗಿಸಿ ಬೆಳೆಗಳನ್ನು ಬಹಳ ಮಟ್ಟಿಗೆ ಸುಧಾರಿಸಬಹುದು. ಇನ್ನೂ ಕೆಲವು ಸ್ಥಳಗಳು ಗುಡ್ಡಗಳಾದರೂ ಮುಂಗಾರು ಮಳೆಯ ಸಹಾಯದಿಂದ ಅಲ್ಲಿ ಪೈರನ್ನು ಯಥೇಚ್ಛವಾಗಿ ಬೆಳೆಸಬಹುದು. ಬತ್ತ ಸಾಧ್ಯವಿಲ್ಲದಿರುವಲ್ಲಿ ಧಾನ್ಯಗಳನ್ನು ಬೆಳೆಸಬಹುದು.

ಮಂಜ: ನಾವು ಬಡವರು ಗುಡ್ಡವನ್ನಗೆದು ಪೈರನ್ನು ಹೇಗೆ ಬೆಳೆಸುವುದು?

ಡೆಮೊ: ಇದಕ್ಕೆ ಹೆದರಬೇಡಿ. ಈಗಿನ ಕಾಲದಲ್ಲಿ ನಿಮ್ಮ ಹಾರೆಯಿಂದ ಅಗೆದು ಗದ್ದೆ ಮಾಡಿಯಾಗಬೇಕೋ? ಬಡ ರೈತರಿಗಾಗಿಯೇ ನಮ್ಮ ಇಲಾಖೆಯವರು ಉಳುವ ಯಂತ್ರ, ಗುಡ್ಡವನ್ನು ತಟ್ಟಿ ಗದ್ದೆಮಾಡುವ ಯಂತ್ರ—ಇವುಗಳನ್ನೆಲ್ಲಾ ಸುಲಭ ಬಾಡಿಗೆಗೆ ಒದಗಿಸುತ್ತಾರೆ. ಇನ್ನು ಎಂತಹ ಗುಡ್ಡವೇ ಇರಲಿ, 'ಬುಲ್ ಡೋ'ಜರಿಗೆ ಅದು ಗಣ್ಯವೇ ಅಲ್ಲ. ಒಂದು ಗಂಟೆಯಲ್ಲೇ ಐವತ್ತು ಜನರ ಕೆಲಸವನ್ನು ಅದು ಮುಗಿಸುವುದು. ಉಳುವ ಯಂತ್ರವೂ ಇದರಂತೆಯೇ. ಎತ್ತುಗಳಿಂದಾಗದ ಗದ್ದೆಗಳನ್ನು ಗಳಿಗೆಯೊಳಗೆ ಉತ್ತುಬಿಡುತ್ತದೆ. ಈ ಸುಧಾರಣೆಗಳನ್ನು ನಾವು ಉಪಯೋಗಕ್ಕೆ ತರುವುದು ಈ ಪರಿಸ್ಥಿತಿಯಲ್ಲಂತೂ ಅನಿವಾರ್ಯ. ಹಾಗೆ ನಿಮಗೆ ಯಾವ ತರದ ಸಲಹೆ-ಸಹಾಯಗಳು ಬೇಕಾಗಿದ್ದಲ್ಲಿ ಅದನ್ನು ಒದ

ಗಿಸುವುದಕ್ಕೆ ನಾವು ಸಿದ್ಧರಿದ್ದೇವೆ. ಇಂತಹ ಸುಸಂದರ್ಭವನ್ನು ಇಂದಿನಿಂದಲೇ ನೀವು ಸದುಪಯೋಗಗೊಳಿಸಬೇಕು.

ಶಿವ: ಪಾರೂ, ಪಾರು ಎಲ್ಲಿದ್ದೀಯಾ?

[ಪಾರವ್ವನು ಒಳಗಿಂದ] ಬಂದೆ. [ಪ್ರವೇಶಿಸುವಳು.]

ಶಿವ: ಈಗ ಇವರು ಬಂದುದಕ್ಕೆ ಏನು ವಿಶೇಷ ಮಾಡಿದೆ?

ಪಾರು: ನಾನು ಆಗಲೇ ಕಾಫಿ ತಯಾರಿಸಿಟ್ಟಿದ್ದೇನೆ. ಈಗಲೇ ತರಲೋ?

ಶಿವ: ಹುಂ, ಬರಲಿ.

[ಪಾರವ್ವನು ಕಾಫಿ ಮತ್ತು ತಿಂಡಿಗಳನ್ನು ತಂದಿರಿಸಿ ಒಂದು ಬದಿಯಲ್ಲಿ ಕುಳಿತುಕೊಳ್ಳುವಳು.]

ಡೆಮೊ: ಉಪಚಾರ ಎಲ್ಲಾ ಸರಿ, ಶಿವರಾಯರೇ. ಈಗ ವನಮಹೋತ್ಸವವನ್ನು ಇಲ್ಲಿ ನೀವೆಲ್ಲಾ ಊರವರು ಯಾವಾಗ ಆಚರಿಸುತ್ತೀರಿ?

ಶಿವ: ಮಂಜು, ನಾಳೆಯೇ ಮಾಡಿಬಿಡೋಣ

ಮಂಜ: ಆಗಲಿ ಬುದ್ಧಿ. ದೊರೆಗಳು ಬಂದುದಕ್ಕೆ ನಾಳೆಯೇ ಮಾಡಿಬಿಡೋಣ.

ಶಿವ: ಹಾಗಾದರೆ, ನಾಳೆ ಬೆಳಗ್ಗೇನೇ ಎಲ್ಲರೂ ಸಸಿಗಳನ್ನು ತೆಕ್ಕೊಂಡು ಮೇಲಿನ ಗುಡ್ಡೆಗೆ ಬರುವಂತೆ ಹೇಳಲು ನೆನಪಿರಲಿ.

ಡೆಮೊ: ನೀವು ಹಾಗೆ ಮಾಡಿದರೆ ನಾನು ಈಗ ಬಂದುದಕ್ಕೆ ಸಾರ್ಥಕವಾಯಿತು.

[ಪಾರವ್ವ ಪುನಃ ಒಮ್ಮೆ ಕಾಫಿಯನ್ನು ಹಂಚುವಳು.]

ಡೆಮೊ: ಅಮ್ಮಾ, ನೀವೂ ಈ ವನಮಹೋತ್ಸವದಲ್ಲಿ ಭಾಗವಹಿಸಬೇಕು. ಪಪ್ಪಾಯಿ ಹರಿವೆಸೊಪ್ಪು....ಮುಂತಾದ ಊಟಕ್ಕೆ ಅಗತ್ಯವಾದ ಸಸಿಗಳನ್ನು ನೀವೇ ನೆಡಬೇಕು. ಇದೇ ನಿಮ್ಮ ದೇಶಸೇವೆ, ಇದೇ ನಿಮ್ಮ ವನಮಹೋತ್ಸವ.

ಪಾರು: ನಾವು ಹೆಂಗಸರು ತಂದುಕೊಟ್ಟದ್ದನ್ನು ಬೇಯಿಸಿಕೊಟ್ಟೇವು; ಮತ್ತೆ ಸಸಿ ನೆಡುವುದೆಲ್ಲಾ ನಮಗೆ ಸಾಧ್ಯವೇ?

ಡೆಮೊ: ಏನಿಲ್ಲಮ್ಮಾ, ಬೇರೆ ದೇಶಗಳಲ್ಲಿ ಹೆಂಗಸರು ಎಷ್ಟು ಮುಂದುವರಿದಿದ್ದಾರೆ ಗೊತ್ತೆ? ಗಂಡಸರಂತೆ ಹೊಲದ ಕೆಲಸ ಅಲ್ಲದೆ ಗಿರಣಿ ಕೆಲಸವನ್ನು ಸಹ ಅವರೇ ಮಾಡುತ್ತಾರೆ. ನಮ್ಮ ದೇಶದಲ್ಲಾದರೆ ಮಾತ್ರ ಹೀಗೆ.

ಹೆಂಗುಸು ಹುಟ್ಟಿದಾರಭ್ಯ ಒಲೆಬುಡದಲ್ಲೇ ಕುಳಿತು ಹೊಗೆ ತಿಂದು ಅಲ್ಲೇ ಸಾಯಬೇಕು—ಅಂತ ಇದ್ದಾರೆ. ನಿಜವಾಗಿ ನೋಡುವುದಾದರೆ ವಿರಾಮ ಕಾಲದಲ್ಲಿ ಅಲ್ಪಸ್ವಲ್ಪ ತರಕಾರಿ ಬೆಳೆಸಬಹುದು.

ಶಿವ: ಅವಳೆಲ್ಲಾ ಈಗಿನ ಕ್ರಮದವಳಲ್ಲ. ಹಳ್ಳಿಯಲ್ಲೇ ಇದ್ದವರಿಗೆ ಈಗಿನ ಸುಧಾರಣೆಗಳೆಲ್ಲಾ ಹೇಗೆ ತಿಳಿಯುತ್ತವೆ, ಸ್ವಾಮಿ?

ಡೆಮೊ: ಅದೆಲ್ಲಾ ಕಾಲಕ್ಕೆ ತಕ್ಕಂತೆ ನಡೆಯಬೇಕು. ತಮ್ಮ ಪ್ರಾಶಸ್ತ್ಯವನ್ನು ತಾವೇ ತಿಳಕೊಳ್ಳಬೇಕು. ಆಗಲಿ, ಶಿವರಾಯರೇ, ನನಗೀಗ ಪುರುಸೊತ್ತಿಲ್ಲ. ನಾನೀಗ ಬರಲೋ?

ಶಿವ: ಹಾಗಾದರೆ ಪ್ರೀತಿಯಿರಲಿ, ನಮಸ್ಕಾರ.

(ಡೆಮೊನ್ಸ್ಟ್ರೇಟರರು ನಮಸ್ಕರಿಸಿ ಹೋಗುತ್ತಾರೆ.)

ಶಿವ: ನೋಡು ಮಂಜಪ್ಪಾ, ನಾವು ನೆಡಲಿಕ್ಕೆ ಹೊರಟದ್ದು ಒಳ್ಳೆಯ ಮುಹೂರ್ತ.

ಮಂಜ: ನೆಡಲಿಕ್ಕೆ ತಂದ ಸಸಿಗಳನ್ನು ಈಗಲೇ ನೆಟ್ಟುಬಿಡೋಣ.

ಶಿವ: ಹೌದು, ಈಗಲೇ ನೋಡೋಣ; ನಾಳೆಗೆ ಬಾಡಿಹೋದೀತು.

(ಶಿವರಾಯನೂ ಮಂಜಪ್ಪನೂ ಸಸಿನೆಡಲು ಹೋಗುವರು.)

(ಕೆಲಸದವನು ಬಂದು ಗ್ಲಾಸುಗಳನ್ನು ತೆಗೆಯುವನು. ಪಾರಮ್ಮನು ಮನದಲ್ಲೇ ಚಿಂತಿಸುತ್ತಾ ಒಂದು ಕುರ್ಚಿಯಲ್ಲಿ ಕುಳಿತುಕೊಳ್ಳುವಳು.)

(ಸರಸಮ್ಮನ ಪ್ರವೇಶ.)

ಸರಸು: ಏನಕ್ಕಾ, ಇಷ್ಟು ಸಂತೋಷ? ಕುರ್ಚಿಯಲ್ಲಿ ಸುಮ್ಮನೆ ಏನೋ ಆಲೋಚಿಸುತ್ತಾ ಕುಳಿತಿದ್ದೀಯಲ್ಲಾ.

ಪಾರು: ಏನಿಲ್ಲ. ಒಂದು ಸಲದ ಕೆಲಸ ಮುಗಿಸಿ ಚಾವಡಿಯಲ್ಲಿ ಹೀಗೆ ಕೂತುಕೊಂಡಿದ್ದೇನೆ.

ಸರಸು: ಅದಾರಕ್ಕ, ಆಗ ದೊಡ್ಡ ಟೊಪ್ಪಿಯವರು ಬಂದದ್ದು?

ಪಾರು: ಅದೋ,—ಕೃಷಿ ಇಲಾಖೆಯವರಂತೆ. ಅವರನ್ನು ಕಾಣಲು ಬಂದಿದ್ದಾರೆ. ಏನೋ ವನಮಹೋತ್ಸವ ಆಚರಿಸಬೇಕು ಅಂತ ಹೇಳಿದ್ದರು. ಅದಿರಲಿ, ಸರಸೂ, ನಾವು ಹಳ್ಳಿ ಹೆಂಗಸರು ಎಷ್ಟು ಹಿಂದಿದ್ದೇವೆ ನೋಡು. ಅಲ್ಲೆಲ್ಲಾ ಹೆಂಗಸರೇ ಸಸಿ ನೆಟ್ಟು ವನಮಹೋತ್ಸವ ಮಾಡು

ತ್ತಾರಂತೆ. ನೀವೂ ನೆಡಬೇಕು ಅಂತ ಆಗ ಬಂದವರು ಒತ್ತಾಯ ಮಾಡಿ ಹೇಳಿದರು.

ಸರಸು: ನಾವೇನಕ್ಕ ನೆಡುವುದು? ನೆಡುವುದೆಲ್ಲಾ ಗಂಡಸರಲ್ಲವೇ?

ಪಾರು: ಏನು ಹೇಳುತ್ತೀಯಾ? ನಾವೂ ನೆಟ್ಟರೆ ಆಗದೂಂತ ಉಂಟೇ? ಅಲ್ಲ, ನಾವು ಒಲೆಬುಡದಲ್ಲಿ ಸಾಯುವುದು ಮಾತ್ರವೇ ನಮಗಿರುವ ಕೆಲಸ? ನಾನು ಹೇಳುತ್ತೇನೆ ಸರಸೂ, ನಾವಿನ್ನು ಹೀಗೇ ಇರಬಾರದು. ಸ್ವಲ್ಪ ವಿಚಾರಮಾಡಿ ನೋಡು. ನಾವು ಯಾಕೆ ಹೀಗೆ ಮನೆಯಲ್ಲಿ ಬಿದ್ದುಕೊಳ್ಳಬೇಕು? ನಾವೂ ಹೊರಗೆ ಹೋದರೆ ಆಗದೆ?

ಸರಸು: ಅಕ್ಕ ಏನು ಹೇಳುವುದು? ಮುಂದೂ ನನಗೆ ತಿಳಿಯುವುದಿಲ್ಲ. ನಮ್ಮಿಂದ ಸಾಧ್ಯವಾದೀತೋ ಗಂಡಸರಂತೆ ಹಾರೆ ಪಿಕ್ಕಾಸು ಹಿಡಿದು ಅಗೆಯಲಿಕ್ಕೆ?

ಪಾರು: ನಾನು ಹೇಳುವುದು ಅಗೆಯಲಿಕ್ಕಲ್ಲ. ಅಲ್ಪ ಸ್ವಲ್ಪ ತರಕಾರಿ ನಾನೇ ಮಾಡಬೇಕೂಂತ. ನಮಗೆ ಏನು ಇಲ್ಲದಿದ್ದರೂ ಪಪ್ಪಾಯಿ ಸಸಿಯಾದರೂ ನೆಡಬಹುದೋ? ಸಾಕು. ನಾವು ನಮ್ಮದೇ ವನಮಹೋತ್ಸವ ಮಾಡೋಣ. ನಮ್ಮ—ಹೆಂಗಸರಿಂದ ಇಷ್ಟೂ ಸಾಗದೆ?

ಸರಸ: ಸಾಗದೇನಕ್ಕ? ಮನಸ್ಸೊಂದಿದ್ದರೆ ಎಲ್ಲಾ ಆಗಬಹುದು. ಈಗ ಏನುಮಾಡಬೇಕು ಅನ್ನುತ್ತೀ? ಸಸಿ ನೆಡಬೇಕೋ ನೆಡೋಣ. ಇವತ್ತೇ ನೆಡೋಣ.

ಪಾರು: ಹಾಗಲ್ಲ. ನಾಳೆ ಅವರೆಲ್ಲಾ ವನಮಹೋತ್ಸವವನ್ನು ಮೇಲಿನ ಗುಡ್ಡೆಯಲ್ಲಿ ಮಾಡುತ್ತಾರೆ. ಒಂದು ಬದಿಯಲ್ಲಿ ನಾವೂ ಸೇರೋಣ.

ಸರಸು: ಆಗಲಿ. ನಾಳೆ ಬೆಳಗ್ಗೆಯೇ ಬರುತ್ತೇನೆ.

ಪಾರು: ಬರುವಾಗ ನೆರೆಮನೆ ಗಂಗು, ತಿಮ್ಮಕ್ಕ........ ಇವರನ್ನೆಲ್ಲಾ ಕರೆದುಕೊಂಡು ಬಾ. ಒಬ್ಬೊಬ್ಬರು ಒಂದೊಂದು ಪಪ್ಪಾಯಿ ಗಿಡ, ಹರಿವೆ ಗಿಡ, ನುಗ್ಗೆ ಸಸಿ ಹಿಡಿದುಕೊಳ್ಳಲಿ.

ಸರಸು: ಹಾಗಾದರೆ ಈಗ ಹೋಗುತ್ತೇನೆ.

ಪಾರು: ಮರೆಯಬೇಡ, ನಾಳೆ ಕಾಣುವಾ.

[ಸರಸಮ್ಮ ಹೊರಡುವಳು. ಪಾರಮ್ಮ ಏಳುವಳು. ತೆರೆ ಬೀಳುವುದು.]

ದೃಶ್ಯ ೪

[ಮಂಜು—ಹೆಗಲಲ್ಲಿ ನೇಗಿಲು, ಕಾಂತಪ್ಪನಿಗೆ ಪಿಕ್ಕಾಸು, ದೂಮಣ್ಣನಿಗೆ ಹಾರೆ, ಪ್ರತಿಯೊಬ್ಬರ ಕೈಗಳಲ್ಲೂ ಒಂದೊಂದು ಹಿಡಿ ಸಸಿಗಳು. ಸರಸಮ್ಮ ಬುಟ್ಟಿಯಲ್ಲಿ ಎಲ್ಲಾ ತರದ ಸಸಿಗಳನ್ನು ಹೊತ್ತುಕೊಂಡಿದ್ದಾಳೆ.]

(ಹಾಡುತ್ತ ಪ್ರವೇಶ.)

ಮಂಜು: ದೇಶದ ಸೇವೆಯ । ತೋಷದಿ ಮಾಡುವ ।
ನೇಗಿಲ ಯೋಗಿಗಳಾವು ॥

(ಒಳಗಿಂದ ಬರುತ್ತಲೇ)

ಎಲ್ಲರೂ: ಓಹ, ನೇಗಿಲ ಯೋಗಿಗಳಾವು ॥

ಮಂಜು: ಓಹೋ, ದೂಮಣ್ಣಾ, ಕಾಂತಪ್ಪಾ, ಬನ್ನಿರಿ.
ಜೀವನ ಸುರಿಸುತ । ಬರವನು ನೀಗುವ
ದೇಶದ ಸೇವಕರಾವೂ ॥

ಎಲ್ಲರೂ; ಓಹ, ದೇಶದ ಸೇವಕರಾವೂ ॥

ದೂಮಣ್ಣ: (ಎದುರು ಬಂದು) ಬತ್ತದ ಪೈರನು ಬೆಳೆಸುವೆವು ।

ಕಾಂತಪ್ಪ: („ „) ರಾಗಿಯ ಬೀಜವ ಬಿತ್ತುವೆವು ।

ಸರಸು: („ „) ಗೆಣಸನು ಮೆಣಸನು ಮಾಡುವೆವು ।

ಕಾಂತಪ್ಪ: („ „) ತರಕಾರಿ ತುಂಬಾ ಬೆಳೆಯುವೆವು ।

ದೂಮ: („ „) ಗೊಬ್ಬರ ಸಸಿಗಳ ನೆಡುತೇವೆ, ।
ನಾಡಿಗೆ ಕಾಡನು ತರುತೇವೆ ॥

ಮಂಜ: („ „) ಕೊನೆಯಲ್ಲಿ ಬೆಳೆಯನು ।
ಹರುಷದಿ ಕೊಯ್ಯುವ ।
ನೇಗಿಲ ಯೋಗಿಗಳಾವು ॥

ಎಲ್ಲರೂ: ಓಹ, ನೇಗಿಲ ಯೋಗಿಗಳಾವು ॥
ಎಲ್ಲರು ತಿನ್ನುತ । ಮನದಲಿ ಸುಖಿಸುವ
ದೇಶದ ಸೇವಕರಾವೂ ।
ಓಹ, ದೇಶದ ಸೇವಕರಾವೂ ॥

(ಹೋಗುವರು. ತೆರೆ ಬೀಳುವುದು.)

ದೃಶ್ಯ ೫

[ಶಿವರಾಯರು ದಂಪತಿಸಮೇತ ಹೊರಟು ಕೇಶವ ಭಾವನೊಡನೆ ಸಂಭಾಷಿಸುತ್ತಾ ಪ್ರವೇಶಿಸುವರು.]

ಶಿವ: ನೋಡು ಕೇಶವ ಭಾವಾ, ನಿನಗೆ ನೆನಪಿದೆಯೋ ಏನೋ. ಸುಮಾರು ಎರಡು ವರ್ಷಗಳ ಹಿಂದೆ ರಾಮಣ್ಣ ಭಟ್ಟರಲ್ಲಿ ಮಾತಾಡಿದೆವಲ್ಲ-ವನಮಹೋತ್ಸವ ಎಂದು. ನಾನು ಆವೊತ್ತು ಮನೆಗೆ ಹೋದವನೇ ಎಲ್ಲರನ್ನೂ ಕೂಡಿಸಿ ಗುಡ್ಡೆಯಲ್ಲಿ ಸಾಧ್ಯವಾದಷ್ಟು ಸಸಿಗಳನ್ನು ನಟ್ಟೆ. ಈಗ ಏನು ಹೇಳುತ್ತೀ ಭಾವಾ, ನಮ್ಮ ಮನೆಯ ಮೇಲೆ ಪೊದರಿನ ಕಾಡೇ ಬೆಳೆದು ಬೆಳೆದುಬಿಟ್ಟದೆ. ನಮಗಿನ್ನು ಸೌದೆ-ಸೊಪ್ಪಿಗಂತೂ ದಾರಿದ್ರ್ಯವೇ ಇಲ್ಲ.

ಕೇಶವ: ಈ ವರ್ಷ ತಮ್ಮ ಬೆಳೆ ಹೇಗೆ? ಸ್ವಲ್ಪ ಸುಧಾರಿಸಿದೆಯೋ?

ಶಿವ: ಸುಧಾರಿಸಿದೆಯೆಂದು ಬೇರೆ ಹೇಳಬೇಕೋ? ನಾನು ಮೊದಲೇ ಹೇಳಿದೆನಲ್ಲ—ಸೊಪ್ಪಿಗೆ ಕ್ಷಾಮ ಇಲ್ಲ ಎಂದು. ಈ ವರ್ಷ ಗದ್ದೆಯನ್ನು ಹಸುರೆಲೆ ಗೊಬ್ಬರದಿಂದ ತುಂಬಿಸಿದ್ದೆ. ಮತ್ತೆ ಬೆಳೆ ಬಾರದೆ ಎಲ್ಲಿ ಹೋದೀತು? ಹೆಚ್ಚಿಲ್ಲ ಈಗ ಎರಡು ವರ್ಷಗಳಿಂದ ಸಿಗುವುದಕ್ಕಿಂತ ಸರೀ ಇಮ್ಮಡಿ ಬೆಳೆ.

ಕೇಶ: ಹೌದಪ್ಪ. ಸರಕಾರದವರೇ ಎಷ್ಟೆಲ್ಲಾ ಸಹಾಯ ನೀಡುತ್ತಾರೆ! ಆವೊತ್ತು ವನಮಹೋತ್ಸವ ಎಂದು ಸುರುಮಾಡಿದ್ದರಿಂದ ಈಗ ಎಲ್ಲರೂ ಸಸಿಗಳನ್ನು ನೆಡುತ್ತಾರೆ. ಕಾಡನ್ನು ವೃಥಾ ಕಡಿದು ಹಾಳು ಮಾಡುವುದಿಲ್ಲ. ಇನ್ನೆಲ್ಲಿಂದ ಬರಗಾಲ ಬರುವುದು? ಹುಂ, ಏನು ಬಿಸಿಲಪ್ಪಾ! ಈ ಗೋಳಿಕಟ್ಟೆಯಲ್ಲಿ ಸ್ವಲ್ಪಹೊತ್ತು ಕುಳಿತುಕೊಳ್ಳೋಣ.

ಶಿವ: ಅಷ್ಟೇ. ಸ್ವಲ್ಪವೇ ಹೊತ್ತು. ಅಷ್ಟರಲ್ಲೇ ನಮ್ಮ ಆಳುಗಳು ಬಂದಾರು. ಸಂತೆಗೆ ತರಕಾರಿ ಹೊತ್ತುಕೊಂಡು ಬರಲಿಕ್ಕೆ ಹೇಳಿದ್ದೇನೆ. ನಮ್ಮವಳಿಗೆ ಒಂದು ಸೀರೆಯೂ ಆಗಬೇಕಂತೆ. ಅವಳೂ ಹೊರಟಿದ್ದಾಳೆ.

ಕೇಶವ: ಈ ವರ್ಷ ಎಲ್ಲಾ ಕಡೆಗಳಲ್ಲಿಯೂ ಬೆಳೆ ಜಾಸ್ತಿ ಎಂದು ಕಾಣುತ್ತದೆ. ಒಟ್ಟು ರಾಶಿ, ನಮ್ಮ ಕಾಲ ಈಗ! ಗಾಂಧಿಜಿಯವರೆಂದ ರಾಮರಾಜ್ಯ ಬಂದಂತಾಯಿತು.

ಶಿವ: ಹೋ, ಬಂದರೋ ಏನೋ, ಹಾಡು ಕೇಳಿಸುತ್ತಿದೆ.

[ಊರವರೆಲ್ಲಾ—(ಉಳಿದ ಎಲ್ಲಾ ಪಾತ್ರದವರು) ಹಣ್ಣುಹಂಪಲು, ಕಾಯಿಪಲ್ಯದ ಹೊರೆ ಹೊತ್ತುಕೊಂಡು ಹಾಡುತ್ತಾ ಪ್ರವೇಶಿಸುವರು.]

(ಪದ್ಯ)

ಭಾರೀ ಹಬ್ಬವು, ರೈತರಿಗಿಂದು ಭೂರಿ ಹಬ್ಬವು ।
ಬೆಳೆಯನೆಲ್ಲ ಸಂತೆಗೊಯ್ವ ನಾಡ ಹಬ್ಬವು ॥

ಮಂಜ: ಧನಿಗಳು ಆಗಲೇ ಬಂದು ಇಲ್ಲಿ ಕೂತಿದ್ದಾರಲ್ಲ! ನಾವೂ ಸ್ವಲ್ಪ ಸಮಯ ದಣಿವಾರಿಸಿಕೊಳ್ಳೋಣ. (ಎಲ್ಲರೂ ಹೊರೆಯನ್ನು ಕೆಳಗಿರಿಸಿ ಕುಳಿತುಕೊಳ್ಳುತ್ತಾರೆ.)

ಕಾಂತ: ಹುಚ್ಚಪ್ಪ! ಈ ವರ್ಷದಷ್ಟು ತರಕಾರಿ ನನಗೆ ಬುದ್ಧಿ ಬಂದ ಅನಂತರ ಆಗಲಿಲ್ಲ. ನಾನು ಬೆಳೆಸಿದ್ದು ಬದನೇಕಾಯಿ ಮಾತ್ರ. ನನಗೆ ನಾಲ್ಕೈದು ಖಂಡಿ ಬದನೆ ಆಗಬಹುದು.

ದೂಮ: ನಾನು ಬೆಳೆಸಲಿಕ್ಕೆ ಎಲ್ಲಾ ಬೆಳೆಸಿದ್ದೇನೆ. ಅದರಲ್ಲಿ ಮೆಣಸಿನ ಕೃಷಿ ಬಲ. ನೆಟ್ಟದ್ದರಲ್ಲಿ ಒಳ್ಳೆ ಬೆಳೆ. ಕಾಲಮಹಿಮೆ!

ಪರಸು: ಎಲ್ಲಾ ದೇವರು ಮಾಡುವುದು. ಆ ಭಗವಂತನಿಗೆ ನಮ್ಮ ಕಷ್ಟವನ್ನು ಕಂಡು ಕರುಣೆಹುಟ್ಟಿತು. ಇಂದು ಬೇಕಾದಷ್ಟು ಕೊಟ್ಟಿದ್ದಾನೆ.

ಶಿವ: ಕೇಶವಭಾವಾ, ಪೂರ್ವಜರು ಹೇಳಿದ್ದು ಎಂದಿಗೂ ಸುಳ್ಳಾಗಲಿಕ್ಕಿಲ್ಲ. 'ಕೃಷಿತೋ ನಾಸ್ತಿ ದುರ್ಭಿಕ್ಷಂ'. ಅದಕ್ಕಿದೇ ಪ್ರತ್ಯಕ್ಷ ಪ್ರಮಾಣ. ದೇವರು ನಮ್ಮ ದೇಶವನ್ನು ಮುಂದೆಯೂ ಹೀಗೆ ಕೃಷಿಯಿಂದ ಉದ್ಧರಿಸಲಿ. ಇದೇ ಅವನಡಿಗಳಲ್ಲಿ ನಮ್ಮ ಪ್ರಾರ್ಥನೆ.

ಕೇಶವ: ಇಂದು ಈ ಸಂತೋಷದ ವೇಳೆಯಲ್ಲಿ ಅವನ ಸ್ತುತಿ ಮಾಡೋಣ.

ಎಲ್ಲರೂ: ಹಾಗೆಯೇ ಆಗಲಿ.

(ಹಾಡು)

ಜಯ ಜಯ ದೇವರ ದೇವಾ ।
ಜಯ ಜಯ ಸರ್ವರ ದೇವಾ ॥ ಪಲ್ಲವಿ ॥
ನಿನ್ನಯ ದಯವಿರೆ, ಸರ್ವವು ಸಿದ್ಧಿಸ-।
ಲಮಿತಾನಂದವ ಪಡೆವೆವು ದೇವಾ ॥

Edited, Printed & Published by K. V. Shenoy
at The Prabhat Printers, Ltd., Mangalore.